ದಿನಾಂಕಃ 28.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

8. ಗುರುಲಿಂಗಪ್ಪರವರ ಜೊತೆ ನನ್ನ ತಾಯಿ ಮದುವೆ ಆಗಿರುವ ತಾರೀಖು ನನಗೆ ಹೇಳಲು ಬರುವುದಿಲ್ಲ, 1973 ರಲ್ಲಿ ಆಗಿದೆ ಎಂದು ಹೇಳಿರುತ್ತಾರೆ. ಮದುವೆಯಲ್ಲಿ ಯಾರು ಯಾರು ಹಿರಿಯರು ಇದ್ದರು ಎಂದು ನನಗೆ ಗೊತ್ತಿಲ್ಲ. ಮದುವೆ ಆಮಂತ್ರಣ ಪತ್ರಿಕೆ ಹಾಗೂ ಭಾವಚಿತ್ರಗಳು ಇರುವುದಿಲ್ಲ. 2 ನೇ ವಾದಿಯ ಹಾಗೂ ಮೃತ ಗುರುಲಿಂಗಪ್ಪರವರ ಮದುವೆ ಗೋವಾದಲ್ಲಿ ಆಗಿರುತ್ತದೆ ಎಂದು ತೋರಿಸಲು ನನ್ನ ಬಾಯಿ ಹೇಳಿಕೆ ಬಿಟ್ಟರೇ ಬೇರೆ ದಾಖಲೆ ಇಲ್ಲ. ಸಿ ಮಿಸ್ ನಲ್ಲಿ ಗುರುಲಿಂಗಪ್ಪರವರು ಮೃತಪಟ್ಟ ನಂತರ ಪ್ರತಿವಾದಿಗಳು ಮಾತ್ರ ವಾರಸಾದರರರು ಅಲ್ಲ ನಾವು ಸಹ ವಾರಸಾದರರು ಎಂದು ದಿಃ20.09.1999 ರಲ್ಲಿ ನಾನು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ5 ಎಂದು ಗುರುತಿಸಲಾಯಿತು. ನಾವು ಸಹ ವಾರಸಾದಾರರು ಎಂದು ನ್ಯಾಯಾಲಯದಲ್ಲಿ ಮಿಸ್ ಕೇಸ್ ನಡೆಯುತ್ತಿದೆ ಎಂದು ಅದರಲ್ಲಿ ಬರೆದಿದ್ದೇನೆ ಎಂದರೆ ಸರಿ.

9. ನಿಮ್ಮ ತಕರಾರನ್ನು ತಳ್ಳಿ ಹಾಕಿ ಪ್ರತಿವಾದಿಗಳಿಗೆ ವಾರಸಾ ಪ್ರಮಾಣಪತ್ರ ಕೊಟ್ಟರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು 1999 ರಲ್ಲಿ ಆ ತಕರಾರು ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ತಕರಾರನ್ನು ವಜಾ ಮಾಡಿ ಪ್ರತಿವಾದಿಗಳಿಗೆ ವಾರಸಾ ಪ್ರಮಾಣಪತ್ರ ಕೊಟ್ಟಿದ್ದನ್ನು ನಾನು ಉಪವಿಭಾಗಾಧಿಕಾರಿ ಬೈಲ್‌ಹೊಂಗಲ್‌ರವರ ಬಳಿ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಾರಂಭದಲ್ಲಿಯೇ ಅದನ್ನು ನೀವು ವಾರಸಾದಾರರು ಅಲ್ಲ, ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಮೇಲ್ಮನವಿಯನ್ನು ವಜಾ ಮಾಡಿದರು ಎಂದರೆ ಸಾಕ್ಷಿ ಉತ್ತರಿಸುತ್ತಿಲ್ಲ. ನಾನು ಹಾಜರು ಪಡಿಸಿದ ನಿಪಿ1 ರಿಂದ 6 ರಲ್ಲಿ ತಾರಾಮತಿರವರ ಹೆಸರನ್ನು ತೆಗೆದು ಮೃತ ಗುರುಲಿಂಗಪ್ಪರವರ ಹೆಸರು, ಅವರು ಮೃತಪಟ್ಟ ನಂತರ ಪ್ರತಿವಾದಿಗಳ ಹೆಸರುಗಳು ಬಂದಿವೆ ಎಂದರೆ ಸರಿ. ದಾವಾ ಮನೆ ಹಾಗೂ ಖಾಲಿ ಜಾಗಕ್ಕೆ ಮೊದಲಿನಿಂದಲೂ ಗುರುಲಿಂಗಪ್ಪರವರ ಹೆಸರು ಆಸ್ತಿಯ

ಉತಾರದಲ್ಲಿ ಇತ್ತು ಎಂದರೆ ಸರಿ. ಗುರುಲಿಂಗಪ್ಪರವರರು ಮೃತಪಟ್ಟ ನಂತರ ಪ್ರತಿವಾದಿಗಳ ಹೆಸರುಗಳು ಆ ಉತಾರದಲ್ಲಿ ದಾಖಲಾಗಿವೆ ಎಂದರೆ ಸರಿ.

10. ಸದರಿ ಹೆಸರುಗಳು ದಾಖಲು ಆಗಿರುವುದನ್ನು ಪ್ರಶ್ನೆ ಮಾಡಿ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಿಪಿ23 ಕಾಶವ್ವರವರು ನೀಡಿದ ಅರ್ಜಿಯ ಪ್ರಕಾರ ಮಾಡಿದ್ದಾರೆ ಎಂದರೆ ಸಾಕ್ಷಿ ನಮ್ಮ ತಂದೆಯವರು ನೀಡಿದ ಅರ್ಜಿಯ ಪ್ರಕಾರ ಮಾಡಿದ್ದಾರೆ ಎನ್ನುತ್ತಾರೆ. ನಿಪಿ26 ಮತ್ತು 27 ಕ್ರಯಪತ್ರಗಳ ಪ್ರಕಾರ ದಾವಾ ಜಮೀನು ಮತ್ತು ಮನೆಯನ್ನು ಗುರುಲಿಂಗಪ್ಪರವರು ಖರೀದಿ ಮಾಡಿರುವುದು ಎಂದರೆ ಸರಿ. ನಿಪಿ28-ಭಕ್ಷೀಸ್ ಪತ್ರ ಓ.ಎಸ್ 365/1990 ರ ಡಿಕ್ರಿಯಲ್ಲಿ ವಜಾ ಆಗಿದೆ ಎಂದರೆ ಸರಿ. ಸದರಿ ದಾವೆಯನ್ನು ಗುರುಲಿಂಗಪ್ಪರವರು ತಾರಾಮತಿ ಹಾಗೂ ಕಾಶವ್ವರವರ ಮೇಲೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿರುವ ಆಸ್ತಿಗಳು ಮತ್ತು ಈ ದಾವೆಯಲ್ಲಿರುವ ಆಸ್ತಿಗಳು ಎರಡೂ ಒಂದೇ ಆಗಿರುತ್ತವೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾರಾಮತಿ ನನ್ನ ಹೆಂಡತಿ ಅಲ್ಲ ಅವರೊಂದಿಗೆ ನನಗೆ ಅನೈತಿಕ ಸಂಭಂದ ಇದೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿ ಬರೆದಿರಬಹುದು ಆದರೆ ಅದು ಸುಳ್ಳು ಎನ್ನುತ್ತಾರೆ.

11. ತಾರಾಮತಿರವರು ಗುರುಲಿಂಗಪ್ಪರವರು ನನ್ನ ಜೊತೆ ಅನೈತಿಕ ಸಂಭಂದ ಇತ್ತು ಎಂದು ಹೇಳಿರುವುದು ಸುಳ್ಳು, ನಾನು ಅವರನ್ನು ಮದುವೆ ಆಗಿದ್ದೇನೆ ಎಂದು ಹೇಳಿ ಮಿಸ್ ಅರ್ಜಿ ದಾಖಲಿಸಿದ್ದು, ಅದು ವಜಾ ಆಗಿದ್ದು, ಅದರ ಮೇಲೆ ನೀವು ಅಪೀಲು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ದಾವೆ ಹಾಗೂ ಮಿಸ್ ಪ್ರಕರಣದ ವಿಚಾರ ನನ್ನ ತಾಯಿಗೆ ಗೊತ್ತು ಎಂದರೆ ಸರಿ. ನಿಪಿ41 ಮತ್ತು 42ರಲ್ಲಿ ಬರೆದಿರುವ ನಿಮ್ಮ ಜನ್ಮ ದಿನಾಂಕ ನಿಪಿ19 ಮತ್ತು 25ರಲ್ಲಿ ದಾಖಲೆಗೆ ವ್ಯತಿರಿಕ್ತವಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ವ್ಯತಿರಿಕ್ತವಾಗಿವೆ, ನಾವು

ಕೇಸ್‌ಗೊಸ್ಕರ ದಾಖಲೆಗಳನ್ನು ತೆಗೆಯುವಾಗ ಅದು 25 ಎಂದು ದಿನಾಂಕ ಬಂತು ನಾನು ಏನು ಮಾಡುವುದು ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ